ಕಡಿಮೆ ಮಾಡತಕ್ಕದ್ದು ಎರಡನೆಯದು. ಈ ಎರಡರಲ್ಲಿ ಯಾವುದಾದರೂ ಒಂದು ನಿರ್ಣಯವನ್ನು ತೆಗೆದುಕೊಂಡು ಇಂಥ ಘಟನೆಗೆ ಮುಂದೆ ಅವಕಾಶ ಕೊಡದೆ ಕಾಲೇಜನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಂಡು ಹೋಗಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಾವು ಈಗಾಗಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಅಧ್ಯಾಪಕರಿಗೆ ಸಂಬಳಸಾರಿಗೆಗಳನ್ನು ಸಮರ್ಪಕವಾಗಿ ಕೊಡಬೇಕು ಎಂದು ಹೇಳಿ ನನ್ನ ಹೇಳಿಕೆಯಲ್ಲಿ ಕೊಟ್ಟಿರುವಂತೆ ಸುಮಾರು 50 ಸಾವಿರ ರೂಪಾಯಿಗಳಷ್ಟು ಹಣವನ್ನು ಸರ್ಕಾರದವರು ಕೊಡತಕ್ಕ ಏರ್ಪಾಡನ್ನು ಮಾಡಿದ್ದೇವೆ. ಇದರ ಜೊತೆಗೆ ಜಿಲ್ಲಾಧಿಕಾರಿಗಳು ತಾಲ್ಲೂಕು ಬೋರ್ಡುಗಳಿಂದ 50 ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ. ಮತ್ತೆ ಇವರಿಗೆ ಎರಡು ಲಕ್ಷ ರೂಪಾಯಿಗಳ ಇಂಟರೆಸ್ಟ್ ಫ್ರೀ ಲೋನ್ ಕೊಟ್ಟು ಅಧ್ಯಾಪಕರಿಗೆ ಸಂಬಳ ಸಾರಿಗೆ ಕೊಡಲು ಕ್ರಮ ತೆಗೆದುಕೊಂಡಿದ್ದೇವೆ, ಅಲ್ಲದೆ ಒಂದು ಸನ್ನಿವೇಶವನ್ನು ನೋಡಿ ಇಂಥ ಕ್ರಮ ತೆಗೆದುಕೊಂಡಿದ್ದೇವೆ. ಈ ಕಾಲೇಜನ್ನು ಸರ್ಕಾರವೇ ವಹಿಸಿಕೊಳ್ಳಬೇಕೋ ಬಿಡಬೇಕೋ ಎನ್ನುವ ಪ್ರಶ್ನೆ ಸರ್ಕಾರದ ಮುಂದೆ ಇದೆ, ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಡಿ. ಹಲಗೇಗೌಡ.—ಸ್ವಾಮಿ. ಎಂ. ಡಿ. ಟಿ. ಡಿ. ಬಿ. ಕಾಲೇಜಿನಲ್ಲಿ ಅಧ್ಯಾಪಕರಿಗೆ ಸರಿಯಾಗಿ ಸಂಬಳ ಸಾರಿಗೆಗಳನ್ನು ಕೊಡದೆ ತೊಂದರೆಯಾಗಿರುವುದು ಇದುಮೊದಲನೆಯ ಸಲವಲ್ಲ. ಇದು ಹಿಂದಿನಿಂದಲೂ ಬಂದಿದೆ. ಯಾವುದಾದರು ಒಂದುಪ್ರೈವೇಟ್ ಇನ್‌ಸ್ಟಿಟ್ಯೂಷನ್‌ನವರು ಇಂಥಾದ್ದನ್ನು ಮಾಡಿದರೆ ತಕ್ಷಣ ಕ್ರಮತೆಗೆದುಕೊಳ್ಳುತ್ತೀರಿ, ಇದು ಸ್ಥಳೀಯಸಂಸ್ಥೆ ಎಂದು ತಾವು ದಯೆ ತೋರಿಸಿದಂತೆ ಕಾಣುತ್ತದೆ. ಆದರೆ ಅಲ್ಲಿ ಸುಮಾರು 11 ತಿಂಗಳಿಂದ ಕೂಡ ಅಧ್ಯಾಪಕರಿಗೆ ಸಂಬಳ ಕೊಡದೆ ಇದ್ದರೆ ಅವರ ಸ್ಥಿತಿಗತಿ ಏನಾಗಿರಬೇಕು, ಅವರಿಗೆ ಸಂಬಳ ಕೊಡದೆ ಇರುವುದಕ್ಕೆ ಕಾರಣ ಏನು ಎನ್ನುವುದನ್ನು ಕಂಡುಹಿಡಿದು ಸಂಬಂಧಪಟ್ಟವರ ಮೇಲೆ ಕ್ರಮವನ್ನು ಏಕೆ ತೆಗೆದುಕೊಳ್ಳಲಿಲ್ಲ ? ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಬೇಕಾದರೆ ತಾವು ಇದಕ್ಕೆ ಅವಕಾಶ ಕೊಡಬಾರದು. ತಾಲ್ಲೂಕು ಬೋರ್ಡಿನವರು 10 ಸಾವಿರ ರೂಪಾಯಿಗಳನ್ನು ಕೊಡಲಿಕ್ಕಾಗುವುದಿಲ್ಲ. ಸರ್ಕಾರದವರು ಸ್ಥಳೀಯ ಸಂಸ್ಥೆಗಳವರು ನಡೆಸತಕ್ಕ ಸೆಕೆಂಡರಿ ಸ್ಕೂಲುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಉಪಕಾರ ಮಾಡಿದ್ದಾರೆ. ಈ ಕಾಲೇಜನ್ನು ಸರ್ಕಾರದವರು ವಹಿಸಿಕೊಂಡು, ಅವರ ವ್ಯವಸ್ಥೆಯನ್ನು ತಾವು ಏಕೆ ನಡೆಸಬಾರದು ? ಇದನ್ನು ತಮ್ಮವಶಕ್ಕೆ ತೆಗೆದುಕೊಂಡು ಅಧ್ಯಾಪಕರಿಗೂ ಮತ್ತು ವಿದ್ಯಾರ್ಥಿಗಳಿಗೂ ಆಗತಕ್ಕ ಕಿರುಕುಳವನ್ನು ತಪ್ಪಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇವೆಲ್ಲ ಪ್ರಶ್ನೆಗಳಿಗೂ ನನ್ನ ಹೇಳಿಕೆಯಲ್ಲಿ ಮತ್ತೆ ಮಾನ್ಯ ದೇವೇಗೌಡ ಅವರಿಗೆ ಉತ್ತರ ಕೊಡುವಾಗ, ಹೇಳಿದ್ದೇನೆ.

re : Strike by the non-teachings staff of Manipal Institute of Technology etc.

ಶ್ರೀ ಎಸ್. ಬಂಗಾರಪ್ಪ (ಸೊರಬ).—ದಕ್ಷಿಣ ಕನ್ನಡ ಜಿಲ್ಲೆಯ ಮಣಿಪಾಲ್ ಸಾರ್ವಜನಿಕ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಮಣಿಪಾಲ್ ತಾಂತ್ರಿಕ ಸಂಸ್ಥೆಯ ಹಾಗೂ ಇತರ ಶಿಕ್ಷಣ ಸಂಸ್ಥೆಗಳ ಬೋಧಕರಲ್ಲದ ಸಿಬ್ಬಂದಿಯವರು ಮುಷ್ಕರ ಹೂಡಿರುವ ವಿಚಾರವನ್ನು ಶಿಕ್ಷಣ ಮಂತ್ರಿಗಳ ಗಮನಕ್ಕೆ ತರುತ್ತೇನೆ.

Sri M. MALLIKARJUNASWAMY (Minister for Education).—Sir, I wish to make the following statement :—

The Manipal Institute of Technology does not receive any grants from Governmenttherefore, and it does not come under the provisions of the Grant-in-Aid Code.

It is reported by the Principal that the nonteaching staff members of the Manipal Institute of Technology formed themselves into an Association and get themselves registered as a Labour Union. It s also understood that the Labour Commissioner instructed the

Assistant Labour Commissioner, Mangalore, to cancel the registration of this Association as such registration was against the ruling of the Supreme Court.

On administrative grounds, the services of 5 employees of the Institution were terminated on 6-11-74. All the non-teaching staff members went on a lightning strike for 2 days and the discharged employees appealed to the District Education Appellate Tribunal, Mangalore, reqesting him to quash the orders of termination and to issue orders of reinstatement. The Tribunal issued stay order on 8-11-1974. This order was infructuous as the order of termination had already been executed. After the strike of two days the employees rejoined duty on 8-11-74. The Appellate Tribunal dismissed the appeals filed by 5 persons referred to above on various grounds, one of which is that the non-teaching members of the Manipal Institute of Technology do not come under the purview of the Karnataka Private Educational Institution (Discipline and Control) Act, 1973, as they are not teachers.

As already stated the Institute referred to above does not come under the Grant-in-Aid Code.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಹೇಳಿಕೆಯ ಪ್ರಕಾರ ಅಲ್ಲಿ ಕೆಲಸ ಮಾಡುತ್ತಿರತಕ್ಕ ನಾನ್ ಟೀಚಿಂಗ್ ಸ್ಟಾಫ್ ಏನು ಇದೆ ಅದು ಲೇಬರ್ ಯೂನಿಯನ್ ಮಾಡಿಕೊಳ್ಳುವ ಹಾಗಿಲ್ಲ, ಗ್ರಾಂಟ್ ಇನ್ ಏಡ್ ಕೋಡ್ ಪ್ರಕಾರ ಇವರು ಸರ್ಕಾರದ ಕಂಟ್ರೋಲ್‌ನಲ್ಲಿಯೂ ಇಲ್ಲ. ಲೇಬರ್ ಯೂನಿಯನ್ ರಿಜಿಸ್ಟರ್ ಮಾಡಿಕೊಂಡಿದ್ದನ್ನೂ ಲೇಬರ್ ಕಮಿಷನರ್ ಅವರು ಮಂಗಳೂರಿನ ಅಸಿಸ್ಟೆಂಟ್ ಲೇಬರ್ ಕಮಿಷನರ್ ಅವರಿಗೆ ತಿಳಿಸಿ ಯೂನಿಯನ್ ರಿಜಿಸ್ಟ್ರೇಷನ್ ಅನ್ನು ಕ್ಯಾನ್ಸಲ್ ಮಾಡಿದ್ದಾರೆ. ಅದಮೇಲೆ ಇವರು ಕರ್ನಾಟಕ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್ ಕಂಟ್ರೋಲ್ ಆಕ್ಟ 1973ರ ಪರ್‌ವ್ಯೂನಲ್ಲಿಯೂ ಇವರು ಬರುವುದಿಲ್ಲ. ಹಾಗಾದರೆ ಇಂಥ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ಜನರ ಹಿತರಕ್ಷಣೆಗೋಸ್ಕರ ಸರ್ಕಾರದವರು ಯಾವ ಕಾನೂನನ್ನು ಮಾಡತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೀರಿ ? ಎರಡನೆಯದು ಈಗ ಇರತಕ್ಕ ಆರ್ಡರ್ ಪ್ರಕಾರ 'Provisions are applicable to those who are working either as teachers or working in any other capacity' ಇದ್ದರೂ ಕೂಡ ಒನ್ಲಿ ಟೀಚರ್ಸ್ ಎನ್ನತಕ್ಕ ಅರ್ಥ ಬರುತ್ತದೆ. ಪರ್ಕಿಂಗ್ ಇನ್ ಎನಿ ಅದರ್ ಕೆಪಾಸಿಟಿ ಎನ್ನುವುದಕ್ಕೆ ಮನ್ನಣೆ ಮಾಡದೆ, ನಾನ್ ಟೀಚಿಂಗ್ ಸ್ಟಾಫ್ ಗೂ ಇದು ಅಪ್ಲಿಕಬಲ್ ಆಗುತ್ತದೆ ಎನ್ನುವ ತೀರ್ಮಾನ ಏಕೆ ಮಾಡಬಾರದು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಅಧ್ಯಕ್ಷರೇ, ಅಲ್ಲಿಯು ಒಂದು ಟ್ರಿಬ್ಯುನರ್ ಈ ಒಂದು ತೀರ್ಮಾನವನ್ನು ಕೊಟ್ಟಿದೆ. ಇನ್ನೂ ಟ್ರಿಬ್ಯುನಲ್‌ಗಳು ಇವೆ. ನನಗೆ ಅನಧಿಕೃತವಾಗಿ ತಿಳಿದು ಬಂದಿರುವ ಪ್ರಕಾರ, ಹೈಕೋರ್ಟಿನವರು 'ಇನ್ ಎನಿ ಅದರ ಕೆಪಾಸಿಟಿ' ಎನ್ನತಕ್ಕದ್ದರಲ್ಲಿ ನಾನ್ ಟೀಚಿಂಗ್ ಸ್ಟಾಫ್ ಇನ್‌ಕ್ಲೂಡ್ ಆಗುವುದೆಂದು ಇತ್ತೀಚೆಗೆ ತೀರ್ಮಾನ ಕೊಟ್ಟಿದ್ದಾರೆ. 'ಇನ್ ಎನಿ ಅದರ್ ಕೆಪಾಸಿಟಿ' ಎಂದರೆ ನಾನ್ ಟೀಚಿಂಗ್ ಸ್ಟಾಫ್ ಕೂಡ ಇದರಲ್ಲಿ ಬರುತ್ತದೆ. ಆದ್ದರಿಂದ ಡಿಸಿಪ್ಲಿನ್ ಕಂಟ್ರೋಲ್ ಆಕ್ಟ 1973 ನೆಯ ಪ್ರಾವಿಷನ್ಸ್ ಕೂಡ ಇವರಿಗೆ ಆಗುತ್ತವೆ.

(ಮಾನ್ಯ ಸದಸ್ಯರುಗಳಾದ ಕಾಗೋಡು ತಿಮ್ಮಪ್ಪ, ಎಸ್. ಬಂಗಾರಪ್ಪ, ಕೋಣಂದೂರು ಲಿಂಗಪ್ಪ ಮತ್ತು ಎಂ. ಎಸ್. ಕೃಷ್ಣನ್ ಅವರು ಎದ್ದು ನಿಂತು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು)

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ಟಿ. ಎ. ಪೈ ಮತ್ತು ರಮೇಶ್ ಪೈ ಅವರ ರಾಜ್ಯ ನಡೆಯುತ್ತಿದೆ.

ಅಧ್ಯಕ್ಷರು.—ಈ ಸಭೆಯನ್ನು ನಡೆಸುವುದಕ್ಕೆ ತಕ್ಕ ನಿಯಮಗಳಿವೆ. ಅದರ ಪ್ರಕಾರ ಎಲ್ಲ ಸದಸ್ಯರೂ ನಡೆಯಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಒಂದುಸಾರಿ ಇದಕ್ಕೆ ಸಂಬಂಧಪಟ್ಟ ಮಸೂದೆಯ ಬಗ್ಗೆ ಇದೇ ರೀತಿಯ ಪ್ರಸ್ತಾಪ ಬಂದಾಗ್ಗೆ ಈ ಒಂದು ವಿಚಾರದಲ್ಲಿ ಬಹಳವಾಗಿ ಅನ್ಯಾಯವಾಗುತ್ತಿದೆ, ದಯವಿಟ್ಟು ಕೂಡಲೇ ಪರಿಶೀಲನೆ ಮಾಡಿ ಎಂಬುದಾಗಿ ನಾನು ಹೇಳಿದ್ದೆ. ಆಗ ನನ್ನ ಮಾತನ್ನು ಕೇಳದೇ ಇದ್ದುದರಿಂದ ಇಂತಹ ಪರಿಸ್ಥಿತಿ ಈಗ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ಈ ಒಂದು ವಿಚಾರ ಜನರ ಗಮನಕ್ಕೆ ಬೀಳುತ್ತಿದೆ. ಕೇಂದ್ರ ಸರ್ಕಾರದಲ್ಲಿರತಕ್ಕ ಸಚಿವರು ಸಂಪೂರ್ಣವಾಗಿ ರಾಜ್ಯಸರ್ಕಾರದ ಮೇಲೆ ಸಾಕಾದಷ್ಟು ಒತ್ತಡವನ್ನು ತಂದುಹಾಕಿದ್ದಾರೆ. ಮಾನ್ಯ ಶ್ರೀ ಟಿ. ಎ. ಪೈ. ಅವರ ಒತ್ತಡದಿಂದ, ನೀವು ಲೇಬರ್ ಕಮಿಷನರ್ ಅವರಿಗೆ ಈ ವಿಚಾರದಲ್ಲಿ ತಿಳಿಸಿದ್ದೀರಿ. ಆದ್ದರಿಂದ ನೀವು ಲೇಬರ್ ಕಮಿಷನರ್ ಮೇಲೆ ಏಕೆ ಕ್ರಮವನ್ನು ತೆಗೆದುಕೊಳ್ಳಬಾರದು? ಅಸಿಸ್ಟೆಂಟ್ ಲೇಬರ್ ಕಮೀಶನರ, ಅವರಿಗೆ ಲೇಬರ್ ಕಮಿಷನರ್ ಅವರು ಏಕೆ ಆ ರೀತಿಯಾಗಿ ತಿಳಿಸಬೇಕಾಗಿತ್ತು? ಅದು ಬಹಳ ಪ್ರಾಮುಖ್ಯವಾದಂಥ ವಿಷಯ. ಇವರು ಕೊಟ್ಟಿರತಕ್ಕ ರೀತಿಯಲ್ಲಿ 6-11-74ರಲ್ಲಿ ಟರ್ಮಿನೇಟ್ ಮಾಡಿದ್ದಾರೆ ಎಂಬುದಾಗಿ ತಿಳಿಸಿದ್ದಾರೆ. ಇವರು ಅದನ್ನು ಎಗ್ಜಿಕ್ಯೂಟ್ ಮಾಡಿದರೋ ಇಲ್ಲವೊ ಗೊತ್ತಿಲ್ಲ. ಟ್ರಿಬ್ಯೂನರ್‌ವರು 8-11-74ರಲ್ಲಿ ಒಂದು ಸ್ಟೇ ಕೊಟ್ಟಿದ್ದಾರೆ. ಅನಂತರ ಎರಡು ದಿವಸಗಳಲ್ಲಿ ಅದು ಎಗ್ಜಿಕ್ಯೂಟ್ ಆದ್ದರಿಂದ ಪ್ರೋಪರ್ಷನ್ ಆಫ್ ದಿ ಆರ್ಡರ್ ಆಫ್ ಸ್ಟೇ ಎಗ್ಜಿಕ್ಯೂಟ್ ಮಾಡಿದ್ದು ಸರಿಯಲ್ಲ. ಅದನ್ನೂ ಕೂಡ ತೆಗೆದಿದ್ದಾರೆ. ಹಾಗಾದರೆ ನೀವು ಅವರಿಗೆ ಯಾವ ರಕ್ಷಣೆಯನ್ನು ಕೊಟ್ಟಿದ್ದೀರಿ? ಯಾವ ಕಾನೂನು ಇಟ್ಟಿದ್ದೀರಿ? ಅವರಿಗೆ ಲಕ್ಷಾಂತರ ರೂಪಾಯಿಗಳ ಜಾಗ ಕೊಟ್ಟಿಲ್ಲವೇ? ಆದರೆ ಅವರಿಗೆ ಕರೆಂಟ್ ಕೊಡುವುದಿಲ್ಲ. ಸರ್ಕಾರದಿಂದ ಒಂದು ಬಿಡಿ ಪೈಸಾ ತೆಗೆದು ಕೊಳ್ಳದೆ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿಯವರು ಆ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಆದ್ದರಿಂದ ನೀವು ಇದರ ಬಗ್ಗೆ ಏಕೆ ಡೈರೆಕ್ಷನ್ ಕೊಡಬಾರದು? ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ಈಗ ಮಾನ್ಯ ಮಂತ್ರಿಗಳು ಹೇಳಿದಹಾಗೆ ಈಗಿರತಕ್ಕ ಹೈಕೋರ್ಟ್‌ನ ತೀರ್ಮಾನದ ಪ್ರಕಾರ Even it is applicable to those who are working in any other capacity, ನಾನು ಸಂತೋಷಪಡುತ್ತೇನೆ. ಈಗ ಕೊಟ್ಟಿರತಕ್ಕ ಉತ್ತರ ಸರಿ ಇಲ್ಲ. ಇಲ್ಲಯವರೆಗೂ ಕೇಂದ್ರ ಸರ್ಕಾರದ ಸಚಿವರ ಒತ್ತಡಕ್ಕೆ ಒಳಗಾಗಿ ಏಕೆ ಮಾಡಿದಿರಿ? ದಯವಾಡಿ ರಾಜ್ಯ ಸರ್ಕಾರ ಅದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೇಂದ್ರ ಸರ್ಕಾರದ ಸಚಿವರ ಯಾವ ತರಹದ ಒತ್ತಡಕ್ಕೂ ನಾವು ಒಳಪಟ್ಟಿಲ್ಲ. ಹಾಗೆ ಹೇಳುವುದು ಏನಿದೆ ಅದು ಸರಿಯಲ್ಲ.

Urging Government to lay records of M/s Nirmala Engineering Co., on the Table of the House

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ನಿನ್ನೆದಿನ ಈ ಸಭೆ ಒಂದು ಗಂಟೆಯ ಸಂದರ್ಭದಲ್ಲಿ ಸರಿಯಾದಂಥ ಕ್ರಮದಲ್ಲಿ ಇದ್ದಿಲ್ಲ. ಆ ಸಂದರ್ಭದಲ್ಲಿ ತಾವು ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ಈ ಸಭೆಯ ಒಪ್ಪಿಗೆಗೋಸ್ಕರ ಈ ಸಭೆಯ ಮುಂದೆ ಇಟ್ಟು ಈ ಸಭೆ ಅದನ್ನು ಅಂಗೀಕಾರಮಾಡಿದೆಯೆಂದು ಘೋಷಣೆಮಾಡಿ ತಾವು ಮುಂದುವರಿಸಿ ಎಂಬುದಾಗಿ ಹೇಳಿಹೋದಂಥ ಸನ್ನಿವೇಶ ತಮಗೆ ಗೊತ್ತು. ಆವಾದಮೇಲೆ ಪುನಃ 2 ಗಂಟೆಗೆ ಮತ್ತೆ ಸಭೆ ಸೇರಿದಾಗ, ಆಗಲೂ ಸಭೆ ಕ್ರಮಬದ್ಧವಾಗಿ ಇದ್ದಿಲ್ಲವೆಂದು ಆ ಸಂದರ್ಭದಲ್ಲಿ ಕ್ರಿಯಾರೋಪವನ್ನು ಎತ್ತಬೇಕೆಂದು ಪ್ರಯತ್ನಮಾಡಿದಾಗ ತಾವು ಏನು ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು, ಈ ಸಭೆಯ ಮುಂದಿಟ್ಟು ಈ ಸಭೆಯು ಮಂಜೂರಾತಿ ಪಡೆದಿದೆಯೆಂದು ಘೋಷಣೆ ಮಾಡಿ ಹೋದಂಥ ಸನ್ನಿವೇಶ ತಮಗೆ ಗೊತ್ತಿದೆ. ಈ ಎರಡು ಸನ್ನಿವೇಶಗಳಲ್ಲಿ ಇವತ್ತು ಪ್ರಸ್ತಾಪಮಾಡಬೇಕಾದ ಅವಶ್ಯಕತೆ ಉಂಟಾಗಿದೆ. ಒಂದು ವಿಷಯ. ನಿನ್ನೆ ಸಭೆ ಕ್ರಮಬದ್ಧವಾಗಿ ಇದ್ದಿಲ್ಲ ಎನ್ನುವುದನ್ನು ನಾನು ಹೇಳಬೇಕಾಗಿಲ್ಲ. ಬಹುಶಃ ಸಭೆಯಲ್ಲಿದ್ದಂಥ ಎಲ್ಲ ಸದಸ್ಯರಿಗೂ ಗೊತ್ತಿದೆ. ನಿರ್ಮಲ ಇಂಜಿನಿಯರಿಂಗ್ ಸಂಸ್ಥೆಗೆ ಸಂಬಂಧಪಟ್ಟ